ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

"ಕನ್ನಡ ಕಾಯಕ ವರ್ಷ ೨೦೨೦-೨೧"

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು.

ಸಂಖ್ಯೆ: ಕಾಶಿಇ/ಶೈವಿ/06/ಸುತ್ತೋಲೆ/2020-21 ದಿನಾಂಕ: 25.02.2021.

## ಸುತ್ತೋಲೆ

**ವಿಷಯ:** ಕಾಲೇಜುಗಳಲ್ಲಿ ಖಾಲಿಯಿರುವ ತರಗತಿ/ಕೊಠಡಿ/ಹೊರಾಂಗಣಗಳಲ್ಲಿ ರಾಜ್ಯ ಎನ್.ಸಿ.ಸಿ. ಇಲಾಖೆಯ ಕೆಡೆಟ್‌ಗಳಿಗೆ ಅಲ್ಪಾವಧಿ ತರಬೇತಿ ಶಿಬಿರಗಳನ್ನು ಆಯೋಜಿಸಲು ಅವಕಾಶ ಕಲ್ಪಿಸುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಪತ್ರ ಸಂಖ್ಯೆ: ಇಡಿ 02 ರಾಯುಸೇ 2021 ದಿನಾಂಕ:22.01.2021.
2. ಮಹಾನಿರ್ದೇಶಕರು, ಎನ್.ಸಿ.ಸಿ. ಇಲಾಖೆ ಇವರ ಪತ್ರ ಸಂಖ್ಯೆ: 003 ಟಿಆರ್‌ಜಿ ಡೈರೆಕ್ಟೀವ್/ಟಿಆರ್‌ಜಿ "ಎ" ದಿನಾಂಕ:30.12.2020.

********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯದ ಎನ್.ಸಿ.ಸಿ. ಇಲಾಖೆಯಲ್ಲಿ 02 ಮತ್ತು 03 ವರ್ಷಗಳ ತರಬೇತಿಯನ್ನು ಪೂರೈಸಿರುವಂತಹ ಎನ್.ಸಿ.ಸಿ. ಕೆಡೆಟ್‌ಗಳಿಗೆ ಎನ್.ಸಿ.ಸಿ. ಘಟಕದಿಂದ 03 ಹಾಗೂ 05 ದಿನಗಳ ಬಿ ಮತ್ತು ಸಿ ಪ್ರಮಾಣ ಪತ್ರ ಪರೀಕ್ಷೆಗಳನ್ನು ನಡೆಸಬೇಕಾಗಿದ್ದು, ಸದರಿ ಪರೀಕ್ಷೆಗಳನ್ನು ನಡೆಸಲು ಹೆಚ್ಚಿನ ಸ್ಥಳದ ಅವಶ್ಯಕತೆಯಿರುತ್ತದೆ. ಪ್ರಸ್ತುತ ಕೋವಿಡ್-19 ಕಾರಣದಿಂದಾಗಿ ರಾಜ್ಯದ ಬಹುತೇಕ ಕಾಲೇಜುಗಳು ತಮ್ಮ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗಳನ್ನು ನಡೆಸುತ್ತಿರುವುದರಿಂದ ಕಾಲೇಜುಗಳ ತರಗತಿ ಕೊಠಡಿಗಳು / ಹೊರಮೈದಾನಗಳು ಖಾಲಿಯಿರುತ್ತವೆ. ಆದ್ದರಿಂದ ರಾಜ್ಯದ ಕಾಲೇಜುಗಳಲ್ಲಿ ಈ ರೀತಿ ಖಾಲಿಯಿರುವ ತರಗತಿ ಕೊಠಡಿಗಳು / ಹೊರ ಮೈದಾನಗಳಲ್ಲಿ ಎನ್.ಸಿ.ಸಿ. ಕೆಡೆಟ್‌ಗಳಿಗೆ 03 ಹಾಗೂ 05 ದಿನಗಳ ಬಿ ಮತ್ತು ಸಿ ಪ್ರಮಾಣ ಪತ್ರ ಪರೀಕ್ಷೆಗಳನ್ನು ನಡೆಸಲು ಅವಕಾಶ ಕಲ್ಪಿಸಿಕೊಡುವಂತೆ ಕೋರಿರುವ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳು ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ತೊಂದರೆಯಾಗದಂತೆ **ಕೋವಿಡ್-19ರ ಮಾರ್ಗಸೂಚಿಗಳನ್ನು ಅನುಸರಿಸಿ ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು** ತಮ್ಮ ಕಾಲೇಜುಗಳಲ್ಲಿ ಖಾಲಿಯಿರುವ ತರಗತಿ ಕೊಠಡಿಗಳು / ಹೊರ ಮೈದಾನಗಳಲ್ಲಿ ಎನ್.ಸಿ.ಸಿ. ಕೆಡೆಟ್‌ಗಳಿಗೆ ಪರೀಕ್ಷೆಗಳನ್ನು ನಡೆಸಲು ಸಹಕರಿಸಬೇಕಾಗಿ ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.

ಪ್ರತಿಯನ್ನು:

1. ಸರ್ಕಾರದ ಅಧೀನ ಕಾರ್ಯದರ್ಶಿಗಳ ಆಪ್ತಶಾಖೆಗೆ, ಬಹುಮಹಡಿಗಳ ಕಟ್ಟಡ, 2ನೇ ಗೇಟ್, 6ನೇ ಮಹಡಿ, ಬೆಂಗಳೂರು -560 001.
2. ಕಛೇರಿ ಪ್ರತಿ.